## ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560001.**

ಸಂಖ್ಯೆ:ಸಿ7[6]ಪ್ರಾಶಿಅ:ಶಾ.ಮು.ನಿ:21:2018–19 ದಿನಾಂಕ:16ನೇ ಮಾರ್ಚ್ 2019

### : ಜ್ಞಾ ಪ ನ :

**ವಿಷಯ**: ಅನುದಾನಿತ ಪ್ರಾಥಮಿಕ / ಪ್ರೌಢಶಾಲೆಗಳನ್ನು ಮುಚ್ಚುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳು

**ಉಲ್ಲೇಖ**: ಕಾರ್ಯದರ್ಶಿಗಳು, ಕಥೋಲಿಕ್ ಶಿಕ್ಷಣ ಮಂಡಳಿ[ರಿ], ಮಂಗಳೂರು, ಇವರ ಪತ್ರ ದಿನಾಂಕ:21.09.2018 [ಈ ಕಛೇರಿಯಲ್ಲಿ ಸ್ವೀಕೃತವಾದ ದಿ:23.02.2019] ಮತ್ತು ದಿನಾಂಕ:29.01.2019 [ಈ ಕಛೇರಿಯಲ್ಲಿ ಸ್ವೀಕೃತವಾದ ದಿ:22.02.2019].

ಅಅಅ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕಾರ್ಯದರ್ಶಿಗಳು, ಕಥೋಲಿಕ್ ಶಿಕ್ಷಣ ಮಂಡಳಿ[ರಿ], ಮಂಗಳೂರು, ಇವರು ಅನುದಾನಿತ ಪ್ರಾಥಮಿಕ / ಪ್ರೌಢಶಾಲೆಗಳನ್ನು ಮುಚ್ಚುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳ ಸ್ಪಷ್ಟ ಮಾಹಿತಿಯನ್ನು ನೀಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಲಾಗಿದೆ. ಖಾಸಗಿ ಅನುದಾನಿತ / ಅನುದಾನ ರಹಿತ ಶಾಲೆಗಳು ಮಕ್ಕಳ ಸಂಖ್ಯೆ ಮತ್ತು ಇತರೆ ಕಾರಣಗಳಿಂದ ಮುಚ್ಚಿದಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ–1983ರಲ್ಲಿ ನಿಯಮ [ಕಂಡಿಕೆ] 105 ಮತ್ತು 106ರಲ್ಲಿ ಹಾಗೂ The Karnataka Educational Institutions [Recruitment and terms and conditions of service of employees in Private Aided Primary and Secondary Educational Institutions] Rules-1999 ರ ನಿಯಮ–12 ಮತ್ತು ನಿಯಮ–13ರಲ್ಲಿ ವಿವರಿಸಿರುವಂತೆ ಶಾಲೆಯನ್ನು ಮುಚ್ಚಿ, ಶಾಲೆಯನ್ನಲ್ಲಿನ ಅನುದಾನಿತ ಶಿಕ್ಷಕರುಗಳನ್ನು ಜಿಲ್ಲೆಯಲ್ಲಿನ ಅನುದಾನಿತ ಶಾಲೆಗಳಲ್ಲಿನ ಖಾಲಿ ಇರುವಂತಹ ಹುದ್ದೆಗಳಿಗೆ ವರ್ಗಾಯಿಸುವುದು. ಶಾಲೆಗೆ ಸಂಬಂಧಪಟ್ಟ ಚರ ಮತ್ತು ಚಿರಾಸ್ಥಿ [movable and Immovable] ಶಾಲೆಯ ಎಲ್ಲಾ ದಾಖಲೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನಿರ್ದೇಶನ ಹೊಂದುವ ಶೈಕ್ಷಣಿಕ ಸಂಸ್ಥೆಗೆ ಹಸ್ತಾಂತರಿಸಬೇಕಾಗುತ್ತದೆ. ಹಸ್ತಾಂತರಿಸಿದ ಮಾಹಿತಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನೀಡತಕ್ಕದ್ದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಮಾಹಿತಿಯನ್ನು ಸುರಕ್ಷಿತವಾಗಿ ಸಂರಕ್ಷಿಸುವ ಜವಾಬ್ದಾರಿ ಹೊಂದಿರುತ್ತಾರೆ.

ಶಾಲೆಗಳನ್ನು ಮುಚ್ಚುವ ಪ್ರಾಧಿಕಾರ ಜಿಲ್ಲಾ ಪ್ರಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರೇ ಆಗಿರುವುದರಿಂದ ಯಾವುದೇ ಖಾಸಗಿ ಅನುದಾನ ಸಹಿತ / ರಹಿತ ಶಾಲೆಗಳನ್ನು ಮುಚ್ಚುವ ಸಂದಭದಲ್ಲಿ ಸೂಕ್ತ ಸಕಾರಣಗಳೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು. ಅದರಂತೆ ಶಿಕ್ಷಣ ಕಾಯ್ದೆ–1983ರಡಿಯಲ್ಲಿ ನೋಂದಣಿ ಪ್ರಾಧಿಕಾರವು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

[ಎಸ್.ಜಯಕುಮಾರ್]
ಅನುದಾನಿತ ಪ್ರಾಥಮಿಕ ಶಾಖೆ.
16/03/19
18/3

**ಇವರಿಗೆ:**

*01.* ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಪ್ರತಿಯನ್ನು:**

*02.* ಕಾರ್ಯದರ್ಶಿಗಳು, ಕಥೋಲಿಕ್ ಶಿಕ್ಷಣ ಮಂಡಳಿ[ರಿ], ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

*03.* ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ.

*04.* ಕಛೇರಿ ಪ್ರತಿ.

F:\New folder\124-2018.docx